# ಅಧ್ಯಾಯ I
## ಪೀಠಿಕೆ

## 1.1 ಆಯವ್ಯಯದ ಪಾರ್ಶ್ವಚಿತ್ರಣ

ಮಹಾಲೇಖಾಪಾಲರು (ಆರ್ಥಿಕ ಮತ್ತು ರಾಜಸ್ವ ವಲಯ ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು, ಇವರು ರಾಜ್ಯದಲ್ಲಿನ ಆರ್ಥಿಕ ವಲಯದ ಅಡಿಯಲ್ಲಿನ 12 ಇಲಾಖೆಗಳು ಮತ್ತು 25 ಸ್ವಾಯತ್ತ ಸಂಸ್ಥೆಗಳ ಲೆಕ್ಕಪರಿಶೋಧನೆಯನ್ನು ಮಾಡುವರು. 2014–19ರಲ್ಲಿ ರಾಜ್ಯ ಸರ್ಕಾರದಿಂದ ಮಾಡಲಾಗಿರುವಂತಹ ಆಯವ್ಯಯ ಅಂದಾಜುಗಳು ಹಾಗೂ ಅವುಗಳಿಗೆ ಪ್ರತಿಯಾಗಿ ವಾಸ್ತವಿಕ ವೆಚ್ಚಗಳ ಸ್ಥಿತಿಗತಿಗಳನ್ನು **ಕೋಷ್ಟಕ 1.1**ರಲ್ಲಿ ನೀಡಲಾಗಿದೆ.

**ಕೋಷ್ಟಕ 1.1: 2014–19ರಲ್ಲಿ ರಾಜ್ಯದ ಆಯವ್ಯಯ ಹಾಗೂ ವಾಸ್ತವಿಕ ವೆಚ್ಚಗಳು**

**(₹ ಕೋಟಿಯಲ್ಲಿ)**

| ವೆಚ್ಚ | 2014–15 | | 2015–16 | | 2016–17 | | 2017–18 | | 2018–19 | |
|---|---|---|---|---|---|---|---|---|---|---|
| | ಆಯವ್ಯಯ ಅಂದಾಜುಗಳು | ವಾಸ್ತವಿಕಗಳು | ಆಯವ್ಯಯ ಅಂದಾಜುಗಳು | ವಾಸ್ತವಿಕಗಳು | ಆಯವ್ಯಯ ಅಂದಾಜುಗಳು | ವಾಸ್ತವಿಕಗಳು | ಆಯವ್ಯಯ ಅಂದಾಜುಗಳು | ವಾಸ್ತವಿಕಗಳು | ಆಯವ್ಯಯ ಅಂದಾಜುಗಳು | ವಾಸ್ತವಿಕಗಳು |
| ಸಾಮಾನ್ಯ ಸೇವೆಗಳು | 29,570 | 28,265 | 30,997 | 30,799 | 35,018 | 31,265 | 38,009 | 34,484 | 45,744 | 42,655 |
| ಸಾಮಾಜಿಕ ಸೇವೆಗಳು | 42,117 | 39,366 | 45,728 | 46,307 | 50,960 | 54,549 | 55,887 | 58,652 | 70,226 | 67,935 |
| ಆರ್ಥಿಕ ಸೇವೆಗಳು | 32,399 | 29,971 | 32,175 | 33,846 | 38,277 | 40,421 | 43,671 | 42,856 | 44,152 | 48,285 |
| ಸಹಾಯಾನು–ಧಾನಗಳು ಮತ್ತು ಕಾಣಿಕೆಗಳು | 6,671 | 6,012 | 6,549 | 6,076 | 5,980 | 5,686 | 7,187 | 6,490 | 6,167 | 5,425 |
| ಒಟ್ಟು (1) | **1,10,757** | **1,03,614** | **1,15,449** | **1,17,028** | **1,30,235** | **1,31,921** | **1,44,754** | **1,42,482** | **1,66,289** | **1,64,300** |
| ಬಂಡವಾಳ ವೆಚ್ಚಗಳು | 20014 | 19,622 | 20,564 | 20,713 | 25,716 | 28,150 | 32,033 | 30,667 | 35,246 | 34,659 |
| ವಿತರಿಸಲಾಗಿರುವ ಸಾಲಗಳು ಮತ್ತು ಮುಂಗಡಗಳು | 477 | 576 | 733 | 657 | 625 | 1,934 | 1,597 | 5,093 | 5,817 | 4,487 |
| ಸಾರ್ವಜನಿಕ ಸಾಲಗಳ ಮರುಪಾವತಿ | 6,760 | 4,812 | 5,788 | 4,110 | 6,841 | 7,420 | 8,176 | 8,269 | 11,136 | 11,083 |
| ಸಾಧಿಲ್ವಾರು ನಿಧಿ | 5 | 0 | 5 | 0 | 5 | 0 | 5 | 0 | 5 | 0 |
| ಸಾರ್ವಜನಿಕ ಲೆಕ್ಕಗಳ ವಿತರಣೆ | 2,57,940 | 1,29,574 | 2,83,523 | 1,55,095 | 3,42,036 | 1,67,154 | 5,09,624 | 1,94,537 | 5,10,667 | 2,34,330 |
| ಅಂತಿಮ ಶಿಲ್ಕು | 0 | 23,901 | 0 | 27,118 | 0 | 34,354 | 0 | 26,184 | 0 | 22,004 |
| ಒಟ್ಟು (2) | **2,85,196** | **1,78,485** | **3,10,613** | **2,07,693** | **3,75,223** | **2,39,012** | **5,51,435** | **2,64,750** | **5,62,871** | **3,06,563** |
| ಒಟ್ಟಾರೆ ಮೊತ್ತ (1+2) | **3,95,953** | **2,82,099** | **4,26,062** | **3,24,721** | **5,05,458** | **3,70,933** | **6,96,189** | **4,07,232** | **7,29,160** | **4,70,863** |

** ಹೂಡಿಕೆಗಳನ್ನು ಒಳಗೊಂಡಿರುವುದಿಲ್ಲ*

*ಮೂಲ: ಸಂಬಂಧಿತ ಸಾಲುಗಳ ವಾರ್ಷಿಕ ಹಣಕಾಸು ತ:ಖ್ತೆಗಳು ಹಾಗೂ ರಾಜ್ಯ ಹಣಕಾಸು ಲೆಕ್ಕಪರಿಶೋಧನಾ ವರದಿಗಳು.*

## 1.2 ರಾಜ್ಯ ಸರ್ಕಾರದ ಸಂಪನ್ಮೂಲಗಳನ್ನು ಅನ್ವಯಗೊಳಿಸಿದ್ದು

2018–19 ಸಾಲಿನಲ್ಲಿ 7,29,160 ಕೋಟಿ ಮೊತ್ತದಷ್ಟು ಒಟ್ಟಾರೆ ಆಯವ್ಯಯದ ಪ್ರತಿಯಾಗಿ ಸಂಪನ್ಮೂಲಗಳ ಅನ್ವಯವು ₹ 4,70,863 ಕೋಟಿ ಆಗಿದ್ದಿತು. ರಾಜ್ಯದ ಒಟ್ಟಾರೆ ವೆಚ್ಚವು[1] 2014–15ರಲ್ಲಿ ಆಗಿದ್ದಂತಹ ₹ 1,23,812 ಕೋಟಿ ಮೊತ್ತಕ್ಕೆ ಪ್ರತಿಯಾಗಿ 2018–19 ಸಾಲಿನಲ್ಲಿ ₹ 2,03,446 ಕೋಟಿ ಆಗಿದ್ದಿತ್ತು ಹಾಗೂ ಅದು ಶೇಕಡಾ 64ರಷ್ಟು ಹೆಚ್ಚಳಗೊಂಡಿದ್ದಿತಾದಲ್ಲಿ, ರಾಜಸ್ವ ವೆಚ್ಚವು ಅದೇ

[1] ಒಟ್ಟಾರೆ ರಾಜಸ್ವ/ವರಮಾನ ವೆಚ್ಚಗಳು, ಬಂಡವಾಳ ವೆಚ್ಚಗಳು ಹಾಗೂ ಸಾಲಗಳು ಮತ್ತು ಮುಂಗಡಗಳು.

ಅವಧಿಯಲ್ಲಿ ₹ 1,03,614 ಕೋಟಿಯಿಂದ ₹ 1,64,300 ಕೋಟಿಗೆ ಏರಿಕೆಯಾಗಿದ್ದು ಅದು ಶೇಕಡಾ 59ರಷ್ಟು ಹೆಚ್ಚಳಗೊಂಡಿದ್ದಿತು. ರಾಜಸ್ವ ವೆಚ್ಚವು ಒಟ್ಟಾರೆ ವೆಚ್ಚದ ಶೇಕಡಾ 35ರಿಂದ 36ರಷ್ಟು ಆಗಿದ್ದಿತಾದಲ್ಲಿ ಬಂಡವಾಳ ವೆಚ್ಚವು ಶೇಕಡಾ 63ರಿಂದ ಶೇಕಡಾ 65ರಷ್ಟು ಆಗಿದ್ದಿತು.

2014–15ರಿಂದ 2018–19ರ ಅವಧಿಯಲ್ಲಿ ಒಟ್ಟಾರೆ ವೆಚ್ಚವು ಶೇಕಡಾ 10 ರಿಂದ 17ರ ದರದಲ್ಲಿ ಹೆಚ್ಚಳಗೊಂಡಿದ್ದಿತಾದಲ್ಲಿ ರಾಜಸ್ವ ಸ್ವೀಕೃತಿಗಳು ಶೇಕಡಾ 8 ರಿಂದ 15ರ ದರದಲ್ಲಿ ಬೆಳವಣಿಗೆಯನ್ನು ಕಂಡಿದ್ದವು.

## 1.3 ನಿರಂತರವಾಗಿ ಉಳಿತಾಯಗಳು

ಕಳೆದ ಐದು ವರ್ಷಗಳಲ್ಲಿ ನಾಲ್ಕು ಅನುದಾನಗಳು ಹಾಗೂ ಧನ ವಿನಿಯೋಗಗಳು ನಿರಂತರವಾಗಿ ₹ 10 ಕೋಟಿಗೂ ಅಧಿಕ ಪ್ರಮಾಣದಲ್ಲಿ ಉಳಿತಾಯಗಳನ್ನು ತೋರಿಸುತ್ತಿದ್ದವು ಹಾಗೂ ಅವು ಒಟ್ಟಾರೆ ಅನುದಾನಗಳ ಶೇಕಡಾ ಐದರಷ್ಟು ಅಥವಾ ಅದಕ್ಕಿಂತಲೂ ಅಧಿಕವಾಗಿದ್ದವು.

**ಕೋಷ್ಟಕ 1.2: ನಿರಂತರವಾಗಿ ಉಳಿತಾಯಗಳನ್ನು ತೋರಿಸುತ್ತಿದ್ದಂತಹ ಅನುದಾನಗಳು**

**(₹ ಕೋಟಿಯಲ್ಲಿ)**

| ಕಮ ಸಂಖ್ಯೆ | ಅನುದಾನದ ಸಂಖ್ಯೆ ಹಾಗೂ ಹೆಸರು | ಉಳಿತಾಯಗಳ ಮೊತ್ತ | | | | |
|---|---|---|---|---|---|---|
| | | 2014–15 | 2015–16 | 2016–17 | 2017–18 | 2018–19 |
| **ರಾಜಸ್ವ/ವರಮಾನ (ಅನುಮೋದಿತ)** | | | | | | |
| 1 | 12, ವಾರ್ತಾ, ಪವಾಸೋಧ್ಯಮ ಮತ್ತು ಯುವಜನ ಸೇವೆಗಳು | 59.94(16) | 18.04 (5) | 34.15 (8) | 94.01 (11) | 98.11 (16) |
| 2 | 21– ಜಲ ಸಂಪನ್ಮೂಲಗಳು | 701.51 (51) | 198.62 (20) | 119.16 (12) | 169.89 (16) | 125.31 (12) |
| **ಅಚಿಊಣಚಿಟ (ಗಿಡಣಜಜ) ಬಂಡವಾಳ (ಅನುಮೋದಿತ)** | | | | | | |
| 3 | 12– ವಾರ್ತಾ, ಪವಾಸ್ಸೋಧ್ಯಮ ಮತ್ತು ಯುವಜನ ಸೇವೆಗಳು | 67.18 (21) | 7.80 (21) | 93.28 (24) | 169.34 (35) | 242.22 (42) |
| 4 | 21– ಜಲ ಸಂಪನ್ಮೂಲಗಳು | 588.80 (7) | 2,231.65 (25) | 1,252.97 (13) | 2,638.20 (21) | 547.46 (5) |

**ಟಿಪ್ಪಣಿ: ಆವರಣದಲ್ಲಿನ ಅಂಕಿಸಂಖ್ಯೆಗಳು ಒಟ್ಟಾರೆ ಅನುವಿಗೆ ಹೋಲಿಸಿದಂತೆ ಶೇಕಡಾವಾರು ಉಳಿತಾಯಗಳನ್ನು ತೋರಿಸುತ್ತವೆ.**
**(ಮೂಲ: ಸಂಬಂಧಿತ ಸಾಲುಗಳ ಧನ ವಿನಿಯೋಗ ಲೆಕ್ಕಪತ್ರಗಳು)**

## 1.4 ಭಾರತ ಸರ್ಕಾರದಿಂದ ಸಹಾಯಾನುಧಾನಗಳು

ಭಾರತ ಸರ್ಕಾರದಿಂದ (ಕೇಂದ್ರ ಸರ್ಕಾರ) ಸಹಾಯಾನುಧಾನಗಳು 2014–15ರಿಂದ 2018–19ರಲ್ಲಿ 2015–16ನೇ ಸಾಲಿನ ಹೊರತಾಗಿ ₹ 14,620 ಕೋಟಿಯಿಂದ ₹ 25,481 ಕೋಟಿಗೆ ಹೆಚ್ಚಳಗೊಂಡಿದ್ದವು. ವಿವರಗಳನ್ನು ಕೋಷ್ಟಕ 1.3ರಲ್ಲಿ ತೋರಿಸಲಾಗಿದೆ.

**ಕೋಷ್ಟಕ 1.3: ಭಾರತ ಸರ್ಕಾರದಿಂದ ಸ್ವೀಕರಿಸಲಾದ ಸಹಾಯಾನುಧಾನಗಳು**

**(₹ ಕೋಟಿಯಲ್ಲಿ)**

| ವಿವರಗಳೂ | 2014–15 | 2015–16 | 2016–17 | 2017–18 | 2018–19 |
|---|---|---|---|---|---|
| ಯೋಜನೇತರ ಅನುದಾನಗಳು | 3,635 | 5,548 | 7,045 | – | – |
| ರಾಜ್ಯ ಯೋಜನಾ ಯೋಜನೆಗಳಿಗೆ (ಪ್ಲಾನ್ ಸ್ಕೀಮ್ಸ್) ಅನುದಾನಗಳು | 9,097 | 8,105 | 8,102 | – | – |
| ಕೇಂದ್ರ ಯೋಜನಾ ಯೋಜನೆಗಳಿಗೆ (ಪ್ಲಾನ್ ಸ್ಕೀಮ್ಸ್) ಅನುದಾನಗಳು | 159 | 139 | 116 | – | – |
| ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಅನುದಾನಗಳು | 1,729 | 137 | 440 | 11,617 | 10,393 |
| ರಾಜ್ಯಗಳಿಗೆ ಇತರೆ ವರ್ಗಾವಣೆಗಳು/ಅನುದಾನಗಳು | – | – | – | 7,316 | 11,714 |
| ಹಣಕಾಸು ಆಯೋಗದ ಅನುದಾನಗಳು | – | – | – | 2,708 | 3,374 |
| **ಖಿಂಣಚಿಟ ಒಟ್ಟು** | **14,620** | **13,929** | **15,703** | **21,641** | **25,481** |

**(ಮೂಲ: ಸಂಬಂಧಿತ ಸಾಲುಗಳ ಹಣಕಾಸು ಲೆಕ್ಕಪತ್ರಗಳು)**

## 1.5 ಲೆಕ್ಕಪರಿಶೋಧನೆಯ ಪೂರ್ವಭಾವಿ ಯೋಜನೆ ಹಾಗೂ ನಡೆಸುವಿಕೆ

ಲೆಕ್ಕಪರಿಶೋಧನೆಯ ಪ್ರಕ್ರಿಯೆಯು ವಿವಿಧ ಇಲಾಖೆಗಳು, ಸ್ವಾಯತ್ತ ಸಂಸ್ಥೆಗಳು ಹಾಗೂ ಯೋಜನೆಗಳು/ಪ್ರಾಜೆಕ್ಟುಗಳಲ್ಲಿನ ಸಂಭಾವ್ಯ ಅಪಾಯಗಳ ನಿರ್ಧಾರಣೆಯೊಂದಿಗೆ ಪ್ರಾರಂಭಗೊಳ್ಳುತ್ತದೆ, ಇದು ಕಾರ್ಯಚಟುವಟಿಕೆಗಳ ವಿಷಮತೆ/ಸಂಕೀರ್ಣತೆ, ನಿಯೋಜಿಸಲಾಗಿರುವಂತಹ ಹಣಕಾಸಿನ ಅಧಿಕಾರಿಗಳ ಮಟ್ಟ, ಆಂತರಿಕ ನಿಯಂತ್ರಣಗಳು ಹಾಗೂ ಸಹಭಾಗಿಗಳ ಚಿಂತನೆಗಳು ಹಾಗೂ ಹಿಂದಿನ ಲೆಕ್ಕಪರಿಶೋಧನೆಗಳಲ್ಲಿ ಗಮನಿಸಲಾಗಿರುವಂತಹ ಅಂಶಗಳನ್ನು ನಿರ್ಧಾರಣೆ ಮಾಡುವುದನ್ನು ಒಳಗೊಂಡಿರುತ್ತದೆ. ಸಂಭಾವ್ಯ ಅಪಾಯಗಳ ನಿರ್ಧಾರಣೆಯ ಆಧಾರದ ಮೇರೆಗೆ, ಲೆಕ್ಕಪರಿಶೋಧನೆಯ ಆವರ್ತನ ಮತ್ತು ವಿಸ್ತಾರ/ವ್ಯಾಪ್ತಿಯನ್ನು ನಿರ್ಧರಿಸಲಾಗುವುದು ಹಾಗೂ ವಾರ್ಷಿಕ ಲೆಕ್ಕಪರಿಶೋಧನೆಯ ಪೂರ್ವಭಾವಿ ಯೋಜನೆಯನ್ನು ರೂಪಿಸಲಾಗುವುದು.

ಲೆಕ್ಕಪರಿಶೋಧನೆಯು ಪೂರ್ಣಗೊಂಡನಂತರ, ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಅಂಶಗಳನ್ನು ಒಳಗೊಂಡಿರುವ ಒಂದು ಪರೀಕ್ಷಣಾ ವರದಿಯನ್ನು ಕಚೇರಿಯ ಮುಖ್ಯಸ್ಥರಿಗೆ ನಾಲ್ಕು ವಾರಗಳ ಒಳಗೆ ಉತ್ತರಗಳನ್ನು ಒದಗಿಸುವಂತೆ ಕೋರುವುದರ ಜೊತೆಗೆ ನೀಡಲಾಗುವುದು. ಉತ್ತರಗಳನ್ನು ಸ್ವೀಕರಿಸಿದಂತೆಲ್ಲಾ, ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವಂತಹ ಅಂಶಗಳನ್ನು ಇತ್ಯರ್ಥಗೊಳಿಸಲಾಗುವುದು ಅಥವಾ ಅನುಪಾಲನಾ ವರದಿಯನ್ನು ಸಲ್ಲಿಸುವ ಸಲುವಾಗಿ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳುವಂತೆ ಸಲಹೆ ನೀಡಲಾಗುವುದು. ಈ ಪರೀಕ್ಷಣಾ ವರದಿಗಳಲ್ಲಿ ಸ್ಪಷ್ಟಪಡಿಸಲಾಗಿರುವ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದ್ದಂತಹ ಪ್ರಮುಖ ಅಂಶಗಳನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಲಾಗುವುದು, ಈ ವರದಿಯನ್ನು ಭಾರತದ ಸಂವಿಧಾನದ ಕಲಮು 151ರ ಅಡಿಯಲ್ಲಿ ಕರ್ನಾಟಕದ ರಾಜ್ಯಪಾಲರಿಗೆ ಸಲ್ಲಿಸಲಾಗುವುದು.

2018–19ರಲ್ಲಿ, ರಾಜ್ಯ ಸರ್ಕಾರದ ಖಜಾನೆಯಿಂದ/ಬ್ಯಾಂಕುಗಳಿಂದ ಹಣಕಾಸನ್ನು ಹೊರಸೆಳೆಯುವ ಮತ್ತು ವಿತರಿಸುವ 138 ಅಧಿಕಾರಿಗಳ ಹಾಗೂ 4 ಸ್ವಾಯತ್ತ ಸಂಸ್ಥೆಗಳ ಅನುಪಾಲನಾ ಲೆಕ್ಕಪರಿಶೋಧನೆಯನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಕರ್ತವ್ಯಗಳು, ಅಧಿಕಾರಗಳು ಮತ್ತು ·ಸೇವಾ ಷರತ್ತುಗಳು) ಅಧಿನಿಯಮ, 1971ರ ಪರಿಚ್ಛೇದ 19(2), 19(3) ಮತ್ತು 20(1)ರ ಅಡಿಯಲ್ಲಿ ಮಹಾಲೇಖಾಪಾಲರು (ಆರ್ಥಿಕ ಮತ್ತು ರಾಜಸ್ವ ವಲಯ ಲೆಕ್ಕಪರಿಶೋಧನೆ), ಕರ್ನಾಟಕ, ಇವರ ಕಚೇರಿಯು ಮಾಡಿತು.

## 1.6 ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಗಮನಾರ್ಹವಾದಂತಹ ಅಂಶಗಳು ಹಾಗೂ ಲೆಕ್ಕಪರಿಶೋಧನೆಗೆ ಸರ್ಕಾರದ ಪ್ರತಿಕ್ರಿಯೆ

ಕಳೆದ ಕೆಲವು ಸಾಲುಗಳಲ್ಲಿ, ಲೆಕ್ಕಪರಿಶೋಧನೆಯು ಆಯ್ದ ಇಲಾಖೆಗಳಲ್ಲಿ ವಿವಿಧ ಕಾರ್ಯಕ್ರಮಗಳನ್ನು/ಕಾರ್ಯಚಟುವಟಿಕೆಗಳನ್ನು ಕಾರ್ಯಗತಗೊಳಿಸುವಲ್ಲಿ ಅನೇಕ ಗಮನಾರ್ಹವಾದಂತಹ ನ್ಯೂನತೆಗಳನ್ನು/ಲೋಪದೋಷಗಳನ್ನು ವರದಿ ಮಾಡಿದ್ದಿತು, ಈ ಲೋಪದೋಷಗಳು ಕಾರ್ಯಕ್ರಮಗಳ ಯಶಸ್ಸಿನ ಮೇಲೆ ಮತ್ತು ಇಲಾಖೆಗಳ ಕಾರ್ಯಚಟುವಟಿಕೆ/ಕಾರ್ಯವೈಖರಿಯ ಮೇಲೆ ಪ್ರತಿಕೂಲ ಪರಿಣಾಮವನ್ನುಂಟು ಮಾಡಿದ್ದವು. ಲೆಕ್ಕಪರಿಶೋಧನೆಯು, ಪರಿಹಾರಕ ಕ್ರಮಗಳನ್ನು ತೆಗೆದುಕೊಳ್ಳುವ ಹಾಗೂ ನಾಗರಿಕರಿಗೆ ಸೇವಾ ವಿತರಣೆಯನ್ನು ಉತ್ತಮಗೊಳಿಸುವ ಸಲುವಾಗಿ ಕಾರ್ಯಾಂಗಕ್ಕೆ ಸೂಕ್ತವಾದಂತಹ ಶಿಫಾರಸುಗಳನ್ನು ಮಾಡುವುದರ ಮೇಲೆ ತನ್ನ ಗಮನವನ್ನು ಹರಿಸಿದ್ದಿತು. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಯಲ್ಲಿ ಸೇರಿಸುವ ಪ್ರಸ್ತಾವನೆಯನ್ನು ಹೊಂದಿರುವಂತಹ ಕರಡು ಕಾರ್ಯನಿರ್ವಹಣಾ ಲೆಕ್ಕಪರಿಶೋಧನಾ ವರದಿಗಳು/ಕರಡು ಕಂಡಿಕೆಗಳಿಗೆ ಇಲಾಖೆಗಳು ಆರು ವಾರಗಳ ಒಳಗೆ ತಮ್ಮ ಪ್ರತಿಕ್ರಿಯೆಗಳನ್ನು/ಉತ್ತರಗಳನ್ನು ಕಳುಹಿಸುವ ಅಗತ್ಯತೆ ಇರುತ್ತದೆ.

ಈ ವರದಿಯ ಭಾಗ – I 'ಕರ್ನಾಟಕದ ಮೃಗಾಲಯಗಳ ಪ್ರಾಧಿಕಾರದಿಂದ ಮೃಗಾಲಯಗಳ ನಿರ್ವಹಣೆ' ಈ ವಿಷಯದ ಮೇಲೆ ಒಂದು ಅನುಪಾಲನಾ ಲೆಕ್ಕಪರಿಶೋಧನೆ ಹಾಗೂ ಇತರೆ ಇಲಾಖೆಗಳ ಅನುಪಾಲನಾ ಲೆಕ್ಕಪರಿಶೋಧನೆಗೆ ಸಂಬಂಧಿತ ಆರು ಕಂಡಿಕೆಗಳನ್ನು ಒಳಗೊಂಡಿರುತ್ತವೆ

ಹಾಗೂ ಅವುಗಳನ್ನು ಸಂಬಂಧಿತ ಇಲಾಖೆಗಳ ಆಡಳಿತಾತ್ಮಕ ಕಾರ್ಯದರ್ಶಿಗಳಿಗೆ ಕಳುಹಿಸಿಕೊಡಲಾಗಿದೆ. ಕೇವಲ ಮೂರು ಅನುಪಾಲನಾ ಲೆಕ್ಕಪರಿಶೋಧನಾ ಕಂಡಿಕೆಗಳಿಗೆ ಮಾತ್ರ ಆಡಳಿತಾತ್ಮಕ ಇಲಾಖೆಗಳಿಂದ ಉತ್ತರಗಳನ್ನು ಸ್ವೀಕರಿಸಲಾಗಿದೆ, ಅಂತಹ ಉತ್ತರಗಳನ್ನು ಲೆಕ್ಕಪರಿಶೋಧನಾ ವರದಿಯಲ್ಲಿ ಸೂಕ್ತವಾಗಿ ಸೇರಿಸಲಾಗಿರುವುದು.

## 1.7 ಲೆಕ್ಕಪರಿಶೋಧನೆಯ ನಿದರ್ಶನದ ಮೇರೆಗೆ ಮಾಡಲಾಗಿರುವ ವಸೂಲಾತಿಗಳು

ಸರ್ಕಾರಿ ಇಲಾಖೆಗಳ ಲೆಕ್ಕಪತ್ರಗಳ ಪರೀಕ್ಷಾ-ಪರಿಶೀಲನೆಯ ವೇಳೆಯಲ್ಲಿ ಹಣಕಾಸಿನ ವಸೂಲಾತಿಗಳನ್ನು ಒಳಗೊಂಡಿರುವಂತಹ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳನ್ನು ಖಚಿತಪಡಿಸುವ ಸಲುವಾಗಿ ಮುಂದಿನ ಅಗತ್ಯ ಕ್ರಮಗಳನ್ನು ಲೆಕ್ಕಪರಿಶೋಧನೆಗೆ ತಿಳಿಸುವ ಮೂಲಕ ತೆಗೆದುಕೊಳ್ಳುವ ಸಲುವಾಗಿ ವಿವಿಧ ಇಲಾಖಾ ಖಜಾನೆಗಳಿಂದ/ಬ್ಯಾಂಕುಗಳಿಂದ ಹಣಕಾಸನ್ನು ಹೊರಸೆಳೆಯುವ ಮತ್ತು ವಿತರಣೆ ಮಾಡುವ ಅಧಿಕಾರಿಗಳಿಗೆ (ಡಿಡಿಒಗಳು) ಕಳುಹಿಸಲಾಗಿದ್ದಿತು. ಲೆಕ್ಕಪರಿಶೋಧನೆಯು ತನ್ನ ಪರೀಕ್ಷಣಾ ವರಧಿಗಳ ಮೂಲಕ ಸ್ಪಷ್ಟಪಡಿಸಿದ ನಂತರ 2018-19ರಲ್ಲಿ ಎರಡು ಇಲಾಖೆಗಳು 8 ಪ್ರಕರಣಗಳಲ್ಲಿ ₹ 13.50 ಲಕ್ಷ ಮೊತ್ತವನ್ನು ವಸೂಲಾತಿ ಮಾಡಿದ್ದವು.

## 1.8 ಲೆಕ್ಕಪರಿಶೋಧನೆಯ ಕಡೆಗೆ ಸರ್ಕಾರದ ಪ್ರತಿಕ್ರಿಯೆಯಲ್ಲಿನ ಕೊರತೆ

ಸರ್ಕಾರಿ ಇಲಾಖೆಗಳ ನಿಯತಕಾಲಿಕ ಪರೀಕ್ಷಣೆಯ ನಂತರ, ಮಹಾಲೇಖಾಪಾಲರು (ಆರ್ಥಿಕ ಮತ್ತು ರಾಜಸ್ವ ವಲಯ ಲೆಕ್ಕಪರಿಶೋಧನೆ) ಲೆಕ್ಕಪರಿಶೋಧನೆಗೆ ಒಳಪಟ್ಟ ಕಚೇರಿಗಳ ಮುಖ್ಯಸ್ಥರಿಗೆ ಅವರ ನಂತರದ ಮೇಲಧಿಕಾರಿಗಳಿಗೆ ಪ್ರತಿಗಳನ್ನು ಕಳುಹಿಸುವುದರೊಂದಿಗೆ ಪರೀಕ್ಷಣಾ ವರದಿಗಳನ್ನು ನೀಡುತ್ತಾರೆ. ಲೆಕ್ಕಪರಿಶೋಧನೆಯಲ್ಲಿ ಸ್ಪಷ್ಟಪಡಿಸಲಾಗಿರುವ ನ್ಯೂನತೆಗಳು ಹಾಗೂ ಲೋಪದೋಷಗಳನ್ನು ಕಾರ್ಯನಿರ್ವಾಹಕ ಅಧಿಕಾರಿಗಳು ತ್ವರಿತವಾಗಿ ಸರಿಪಡಿಸಿ ತೆಗೆದುಕೊಳ್ಳಲಾದಂತಹ ಕ್ರಮಗಳ ಬಗ್ಗೆ ಅನುಪಾಲನಾ ವರದಿಯನ್ನು ಮಹಾಲೇಖಾಪಾಲರಿಗೆ ನಾಲ್ಕು ವಾರಗಳ ಒಳಗೆ ನೀಡುವುದನ್ನು ನಿರೀಕ್ಷಿಸಲಾಗಿರುತ್ತದೆ. ಬಾಕಿಯಿರುವ ಪರೀಕ್ಷಣಾ ವರದಿಗಳಲ್ಲಿ ಲೆಕ್ಕಪರಿಶೋಧನೆಯು ಸ್ಪಷ್ಟಪಡಿಸಿರುವಂತಹ ಅಂಶಗಳನ್ನು ಮೇಲ್ವಿಚಾರಣೆ ಮಾಡುವ ಹಾಗೂ ತೆಗೆದುಕೊಳ್ಳಲಾದ ಪರಿಹಾರಕ ಕ್ರಮಗಳ ಬಗ್ಗೆ ಅನುಪಾಲನಾ ವರದಿಯನ್ನು ಸಲ್ಲಿಸುವುದಕ್ಕೆ ಅನುಕೂಲ ಕಲ್ಪಿಸುವ ಸಲುವಾಗಿ ಆರು ತಿಂಗಳುಗಳಿಗೂ ಮೀರಿದಂತೆ ಬಾಕಿಯಿರುವಂತಹ ಪರೀಕ್ಷಣಾ ವರದಿಗಳ ಅರ್ಧ ವಾರ್ಷಿಕ ವರದಿಗಳನ್ನೂ ಸಹ ಇಲಾಖೆಗಳ ಸಂಬಂಧಿತ ಆಡಳಿತಾತ್ಮಕ ಕಾರ್ಯದರ್ಶಿಗಳಿಗೆ ಕಳುಹಿಸಲಾಗುತ್ತದೆ. ಮಾರ್ಚ್ 2019ರಲ್ಲಿದ್ದಂತೆ, ₹ 19,473.91 ಕೋಟಿ ಮೊತ್ತದಷ್ಟು ಹಣಕಾಸಿನ ಮೌಲ್ಯವನ್ನು ಹೊಂದಿದ್ದಂತಹ 1,128 ಪರೀಕ್ಷಣಾ ವರದಿಗಳಿಗೆ ಸಂಬಂಧಿಸಿದ್ದ 6,816 ಕಂಡಿಕೆಗಳು ಆರ್ಥಿಕ ವಲಯಕ್ಕೆ (ಸಾರ್ವಜನಿಕ ವಲಯದ ಉದ್ದಿಮೆಗಳಲ್ಲದ) ಸಂಬಂಧಿಸಿದ್ದಂತಹ ಲೆಕ್ಕಪರಿಶೋಧನೆಗೆ ಒಳಪಡುವ ವಿವಿಧ ಘಟಕಗಳು/ಕಚೇರಿಗಳ ಪ್ರತಿಯಾಗಿ ಬಾಕಿಯಿದ್ದವು. ಲೆಕ್ಕಪರಿಶೋಧನಾ ವರದಿಗಳ ಬಹಳಷ್ಟು ಸಂಖ್ಯೆಯಲ್ಲಿದ್ದ ಬಾಕಿಗಳು ಲೆಕ್ಕಪರಿಶೋಧನೆಯಲ್ಲಿ ಸ್ಪಷ್ಟಪಡಿಸಿರವಂತಹ ನಿಯಮಬಾಹಿರತೆಗಳನ್ನು ಸರಿಪಡಿಸುವುದಕ್ಕಾಗಿ ಪರಿಹಾರಕ ಕ್ರಮಗಳನ್ನು ತೆಗೆದುಕೊಳ್ಳುವ ಸಲುವಾಗಿ ನಿಯಂತ್ರಣ ಅಧಿಕಾರಿಗಳು ಯಾವುದೇ ಕ್ರಮಗಳನ್ನೂ ಕೈಗೊಂಡಿರಲಿಲ್ಲ ಎಂಬುದನ್ನು ಸೂಚಿಸುತ್ತಿದ್ದವು. ವರ್ಷವಾರು ಬಾಕಿಗಳ ವಿವರಗಳನ್ನು **ಕೋಷ್ಟಕ 1.4**ರಲ್ಲಿ ವಿವರಿಸಲಾಗಿದೆ.

**ಕೋಷ್ಟಕ 1.4: ಬಾಕಿಯಿರುವ ಪರೀಕ್ಷಣಾ ವರದಿಗಳು ಮತ್ತು ಕಂಡಿಕೆಗಳ ವರ್ಷವಾರು ವಿಘಟನೆ**

**(₹ ಕೋಟಿಯಲ್ಲಿ)**

| ವರ್ಷ | ಪರೀಕ್ಷಣಾ ವರದಿಗಳ ಸಂಖ್ಯೆ | ಕಂಡಿಕೆಗಳ ಸಂಖ್ಯೆ | ಮೊತ್ತ |
|---|---|---|---|
| 2013ರವರೆಗೆ | 357 | 1455 | 2,559.87 |
| 2013-14 | 154 | 805 | 1,484.68 |
| 2014-15 | 128 | 795 | 842.09 |
| 2015-16 | 143 | 910 | 4,060.82 |
| 2016-17 | 125 | 912 | 3,675.85 |
| 2017-18 | 124 | 1011 | 313.97 |
| 2018-19 | 97 | 928 | 6,536.63 |
| **ಒಟ್ಟು** | **1128** | **6816** | 19,473.91 |

ಇಲಾಖಾವಾರು ಬಾಕಿಯಿರುವ ಕಂಡಿಕೆಗಳ ವಿವರಗಳನ್ನು **ಅನುಬಂಧ 1.1**ರಲ್ಲಿ ವಿವರಿಸಲಾಗಿದೆ.

## 1.9 ಲೆಕ್ಕಪರಿಶೋಧನಾ ವರದಿಗಳ ಮೇಲೆ ಅನುಸರಣಾ ಕ್ರಮಗಳು

ಸರ್ಕಾರದ ಇಲಾಖೆಗಳು ಲೆಕ್ಕಪರಿಶೋಧನಾ ವರದಿಗಳಲ್ಲಿ ಸ್ಪಷ್ಟಪಡಿಸಲಾಗಿರುವ ಅಂಶಗಳ ಮೇಲೆ ಇಲಾಖಾ ಟಿಪ್ಪಣಿಗಳ ರೂಪದಲ್ಲಿ ಸವಿವರ ವಿವರಣೆಗಳನ್ನು, ಅವುಗಳ ಪ್ರತಿಗಳನ್ನು ಲೆಕ್ಕಪರಿಶೋಧನಾ ಕಚೇರಿಗೆ ಕಳುಹಿಸುವ ಜೊತೆಯಲ್ಲಿ ಸರ್ಕಾರದ ಇಲಾಖೆಗಳು ಲೆಕ್ಕಪರಿಶೋಧನಾ ವರದಿಗಳನ್ನು ಕರ್ನಾಟಕ ಶಾಸಕಾಂಗದ ಸಚಿವಾಲಯದ ಮುಂದೆ ಮಂಡಿಸಿದ ದಿನಾಂಕದಿಂದ ನಾಲ್ಕು ತಿಂಗಳುಗಳ ಒಳಗೆ ಸಲ್ಲಿಸತಕ್ಕದ್ದು ಎಂಬುದನ್ನು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಕಾರ್ಯವಿಧಾನ (ಆಂತರಿಕ ಕಾರ್ಯವೈಖರಿ) ನಿಯಮಗಳು, 1999 ಅನುವು ಮಾಡಿರುತ್ತವೆ.

ಆಡಳಿತಾತ್ಮಕ ಇಲಾಖೆಗಳು ಈ ನಿರ್ದೇಶನಗಳನ್ನು ಅನುಸರಿಸಿರಲಿಲ್ಲ ಹಾಗೂ ಎಂಟು ಇಲಾಖೆಗಳು (**ಅನುಬಂಧ 1.2**ರಲ್ಲಿ ವಿವರಿಸಿರುವಂತೆ) 2003–04 ರಿಂದ 2017–18ರ ಅವಧಿಗೆ 27 ಕಂಡಿಕೆಗಳಿಗೆ ಇಲಾಖಾ ಟಿಪ್ಪಣಿಗಳನ್ನು ಸಲ್ಲಿಸಿರುವುದಿಲ್ಲ.

ಮಾರ್ಚ್ 2020ರಲ್ಲಿದ್ದಂತೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯಿಂದ ಚರ್ಚಿಸಲು ಬಾಕಿಯಿರುವ ಕಂಡಿಕೆಗಳ ವಿವರಗಳನ್ನು **ಅನುಬಂಧ 1.3**ರಲ್ಲಿ ನೀಡಲಾಗಿದೆ. ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯಲ್ಲಿ ಚರ್ಚಿಸಲು ಬಾಕಿಯಿರುವ 1996–97 ರಿಂದ 2017–18ರ ಅವಧಿಯ ವಿವಿಧ ಸಾಲುಗಳ ಲೆಕ್ಕಪರಿಶೋಧನಾ ವರದಿಗಳಿಗೆ ಸಂಬಂಧಿಸಿದಂತೆ 81 ಕಂಡಿಕೆಗಳಿರುವವು. ಕಂಡಿಕೆಗಳನ್ನು ಚರ್ಚಿಸುವಲ್ಲಿನ ವಿಳಂಬ ಅಥವಾ ಚರ್ಚಿಸದಿರುವುದು ಕಾರ್ಯಾಂಗದ ಹೊಣೆಗಾರಿಕೆಯಿಂದ ನುಣಿಚಿಕೊಂಡಂತಾಗುವುದು.

## 1.10 ಸ್ವಾಯತ್ತ ಸಂಸ್ಥೆಗಳ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳನ್ನು ರಾಜ್ಯ ವಿಧಾನ ಸಭೆಯ ಮುಂದೆ ಮಂಡಿಸುವಿಕೆಯ ಸ್ಥಿತಿಗತಿ

ಆರ್ಥಿಕ ವಲಯದ ಅಡಿಯಲ್ಲಿನ ಮೂರು ಸಂಸ್ಥೆಗಳ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಗೆ ವಹಿಸಲಾಗಿರುವುದು. ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಹಾಗೂ ಖಾದಿ ಮತ್ತು ಗ್ರಾಮೀಣ ಕೈಗಾರಿಕಾ ಮಂಡಳಿ (ಕೆವಿಐಬಿ), ಇವುಗಳಿಗೆ ಸಂಬಂಧಿಸಿದಂತೆ ಲೆಕ್ಕಪತ್ರಗಳನ್ನು 2018–19 ಸಾಲಿನವರೆಗೆ ಸಲ್ಲಿಸಿರುತ್ತವೆ ಹಾಗೂ 2017–18ರ ಅವಧಿಗೆ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳನ್ನು (ಎಸ್ಎಆರ್‌ಗಳು) ರಾಜ್ಯ ಶಾಸಕಾಂಗದ ಮುಂದೆ ಮಂಡಿಸಲಾಗಿರುವುದು. ಕರ್ನಾಟಕ ಜೀವವೈವಿಧ್ಯ ಮಂಡಳಿಗೆ (ಕೆಬಿಬಿ) ಸಂಬಂಧಿಸಿದಂತೆ, ಲೆಕ್ಕಪತ್ರಗಳನ್ನು 2019–20ರ ಅವಧಿಯವರೆಗೂ ಸ್ವೀಕರಿಸಲಾಗಿರುವುದು ಹಾಗೂ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಯನ್ನು ಕರ್ನಾಟಕ ಶಾಸಕಾಂಗದ ಮುಂದೆ ಮಂಡಿಸುವ ಸಲುವಾಗಿ ಕಳುಹಿಸಲಾಗುತ್ತಿರುವುದು.

## 1.11 ಲೆಕ್ಕಪರಿಶೋಧನಾ ವರದಿಗಳಲ್ಲಿ ಪ್ರಕಟವಾಗಿರುವ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳು ಮತ್ತು ಕಂಡಿಕೆಗಳ ವರ್ಷವಾರು ವಿವರಗಳು

ಕಳೆದ ಎರಡು ವರ್ಷಗಳಲ್ಲಿ ಲೆಕ್ಕಪರಿಶೋಧನಾ ವರದಿಗಳಲ್ಲಿ ಪ್ರಕಟವಾಗಿರುವಂತಹ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳು ಮತ್ತು ಕಂಡಿಕೆಗಳು ಹಾಗೂ ಅವುಗಳ ಹಣಕಾಸು ಮೌಲ್ಯಗಳ ವರ್ಷವಾರು ವಿವರಗಳನ್ನು ಈ ಕೆಳಗಿನ **ಕೋಷ್ಟಕ 1.5**ರಲ್ಲಿ ನೀಡಲಾಗಿದೆ:

**ಕೋಷ್ಟಕ 1.5: 2016–18ರಲ್ಲಿ ಲೆಕ್ಕಪರಿಶೋಧನಾ ವರದಿಗಳಲ್ಲಿ ಪ್ರಕಟವಾಗಿರುವ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳು ಹಾಗೂ ಕಂಡಿಕೆಗಳ ವಿವರಗಳು**

| ವರ್ಷ | ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ | | ಕಂಡಿಕೆಗಳು | | ಸ್ವೀಕರಿಸಲಾಗಿರುವ ಉತ್ತರಗಳು | |
|---|---|---|---|---|---|---|
| | ಸಂಖ್ಯೆ | ಹಣಕಾಸಿನ ಮೌಲ್ಯ (₹ ಕೋಟಿಯಲ್ಲಿ) | ಸಂಖ್ಯೆ | ಹಣಕಾಸಿನ ಮೌಲ್ಯ (₹ ಕೋಟಿಯಲ್ಲಿ) | ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ | ಕಂಡಿಕೆಗಳು |
| 2016–17 | 1 | 1,164.40 | 13 | 187.25 | -- | 4 |
| 2017–18 | 2 | 3,349.68 | 7 | 1,106.50 | -- | 1 |

2018–19ರಲ್ಲಿ ಒಂದು ಅನುಪಾಲನಾ ಲೆಕ್ಕಪರಿಶೋಧನೆ ಹಾಗೂ ಆರು ಕಂಡಿಕೆಗಳನ್ನು (₹ 35.64 ಕೋಟಿ) ಈ ವರದಿಯಲ್ಲಿ ಸೇರಿಸಲಾಗಿರುವುದು.

*******